**ಸೋಮವಾರಪೇಟೆ ಪ್ರಧಾನ ಪ್ರ ದ ನ್ಯಾ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ**

ಸಿಸಿ ನಂಃ**159/2023**

**ಪಿರ್ಯಾದಿ ಃ** ಶ್ರೀ. ಸಿ.ಎ.ರಮೇಶ್

ಃವಿಃ

**ಆರೋಪಿ ಃ** ಸಿ.ಜೆ.ಮೋಹನ್

**ಆಪಾದನೆ**

**ಶ್ರೀ.ಕೆ.ಗೋಪಾಲ ಕೃಷ್ಣ,** ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ. ದಂಡಾಧಿಕಾರಿಗಳು, ಸೋಮವಾರಪೇಟೆ, ಆದ ನಾನು ನಿಮ್ಮ ಮೇಲೆ ಅಂದರೆ

ಆರೋಪಿ ಃ ಸಿ.ಜೆ.ಮೋಹನ್ ತಂದೆಃ ಪೌತಿ ಎಂ.ಬಿ.ಜೋಯಪ್ಪ, 53 ವರ್ಷ, ಚಿಕ್ಕತೋಳೂರು ಗ್ರಾಮ, ಶಾಂತಳ್ಳಿ ಹೋಬಳಿ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

ಈ ಕೆಳಗಿನಂತೆ ಅಪಾದನೆಯನ್ನು ಹೊರೆಸಿದ್ದೇನೆ.

ನೀವು ಪಿರ್ಯಾದುದಾರರಿಗೆ ರೂ.1,50,000/-ಗಳನ್ನು ಕೊಡಬೇಕಾಗಿದ್ದು, ಸದರಿ ಹಣವನ್ನು ಆದಷ್ಟು ಬೇಗ ಮರುಪಾವತಿ ಮಾಡುವುದಾಗಿ ಆಶ್ವಾಸನೆ ನೀಡಿರುವಿರಿ. ಸದ್ರಿ ಹಣ ದ ಮರುಪಾವತಿಗಾಗಿ ದಿನಾಂಕಃ 16.02.2023 ಅನ್ನು ನಮೂದಿಸಿ **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸೋಮವಾರಪೇಟೆ ಶಾಖೆಯ** ಚಕ್ ನಂಃ 473720 ರಲ್ಲಿ ರೂ.2,50,000/-ಗಳೆಂದು ಬರೆದು ಚಕ್‌ನ್ನು ಪಿರ್ಯಾದಿ ಹೆಸರಿಗೆ ನಗದಾಗುವಂತೆ ನೀಡಿರುತ್ತಿರಿ. ಪಿರ್ಯಾಧಿ ಸದ್ರಿ ಚಕ್ಕನ್ನು ಕರ್ನಾಟಕ ಗ್ರಾಮೀಣ ಬ್ಯಾಂಕ್,. ಸೋಮವಾರಪೇಟೆ ಶಾಖೆಯ ಹಾಜರುಪಡಿಸಿದಾಗ ಸದ್ರಿ ಚಕ್ಕು “ **funds Insufficient”** ಎಂಬ ಹಿಂಬರಹದೊಂದಿಗೆ ವಾಪಾಸ್ಸು ಬಂದಿರುತ್ತದೆ. ನಂತರ ಕಾನೂನು ರೀತ್ಯ ದಿನಾಂಕಃ 21.02.2023 ರಂದು ನೊಂದಾಯಿತ ಹಾಗೂ ಜರೂರು ಅಂಚೆಯ ಮೂಲಕ ನಿಮಗೆ ನೋಟಿಸನ್ನು ನೀಡಿದರು ನೀವು ಹಣವನ್ನು ಪಾವತಿಸಿಲ್ಲ ಹಾಗೂ ಉತ್ತರವನ್ನು ನೀಡಿಲ್ಲ. ಇದು 138, 142 ಎನ್.ಐ.ಆ್ಯಕ್ಟ ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವೆಸಗಿದ್ದೀರಿ.

ಪ್ರಃ1 ಈಗ ಓದಿ ವಿವರಿಸಿದ ಅಪಾದನೆ ತಿಳಿದಿದೆಯಾ?
ಉಃ

ಪ್ರಃ2 ಮೇಲಿನ ಅಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ನಿಮ್ಮ ಪರ ರಕ್ಷಣೆ ಇದೆಯಾ?
ಉಃ

ಸಹಿ/-

ದಿಃ 15.05.2024 ಪ್ರ ದಂ ನ್ಯಾ ದಂ ,ಸೋಮವಾರಪೇಟೆ